

‘‘ನನಗೆ ಬೇಕಿರುವುದು ಪ್ರತೀಕಾರ. ನನ್ನವರು ಮೂವರು ಸತ್ತಿದ್ದಾರೆ. ನಾನು ಅವರಲ್ಲಿ ಕಡಿಮೆ ಎಂದರೂ ಆರು ಜನರನ್ನು ಕೊಲ್ಲಬೇಕು.’’

“ಭೇಷ್, ಎ.ಕೆ. 47 ಅಭ್ಯಾಸ ಇದೆಯಾ? ಗುರಿ ಇಟ್ಟು ಬಾಂಬು ಎಸೆಯಬಲ್ಲಿರಾ?”

“ತರಬೇತಿ ನೀಡಿದರೆ ಎರಡನ್ನೂ ಮಾಡಬಲ್ಲೆ.”

“ಸಿಂಹ ಹುಲಿ ಪರಸ್ಪರ ಎದುರಾದರೆ ಚಾಕಚಕ್ಯತೆಯಿಂದ ಗೆಲ್ಲೋದು ಹುಲಿ. ನೀವು ತಮಿಳ್ ಪುಲಿ. ಆ ಶೋಂಬೇರಿ ಸಿಂಹಗಳನ್ನು ಗೆಲ್ಲುವ ಸಾಮರ್ಥ್ಯ ಇರುವವರು.”

ವೇಲುಪಿಳ್ಳೈ ನನ್ನ ಭುಜ ತಟ್ಟಿದರು. ಎಂತಹ ಬಲಿಷ್ಠ ಕೈಯದು! ಸ್ವತಂತ್ರ ನಾಡಿಗಾಗಿ ಕಾಡು ಸೇರಿದ ಆತನೆದುರು ನಾನು ಕುಬ್ಜನಾದೆ ಎನಿಸಿತು.

‘‘ಈಳಂ ಸೇರಿದ ಮೇಲೆ ಮತ್ತೆ ಭಾರತಕ್ಕೆ ಮರಳುವ ಯೋಚನೆ ಮಾಡಕೂಡದು. ನಮಗೊಂದು ನಾಡು ಸಿಗುವವರೆಗೆ ವಿಶ್ರಾಂತಿ ಇಲ್ಲ. ಇದು ಕಷ್ಟ ಎಂದಾದರೆ ನಿಮ್ಮನ್ನು ಮರಳಿ ಭಾರತಕ್ಕೆ ಕಳುಹಿಸುವ ಏರ್ಪಾಡು ಮಾಡುತ್ತೇನೆ.’’